ವಿಷಯ: ಮುಧೋಳ ತಾಲ್ಲೂಕಿಗೆ ಕುಡಿಯುವ ನೀರಿನ ಸಮಸ್ಯೆ ಕುರಿತು.

2460 (3528)

ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಧೋಳ ತಾಲ್ಲೂಕಿನ ಯಡಹಳ್ಳಿ, ಇಂಗಳಗಿ, ಜೀರಗಾಳ ಈ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದ ಕ್ರಮವೇನು?

ಇ) ಇನ್ನೂ ಎಷ್ಟು ದಿನಗಳಲ್ಲಿ ಕುಡಿಯುವ ನೀರನ್ನು ಪೂರೈಸಲಾಗುವುದು?

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):

ಅ) ಬಂದಿದೆ.

ಆ) ಸದರಿ ಮೂರು ಗ್ರಾಮಗಳು ಇನ್ನುಳಿದ 10 ಗ್ರಾಮಗಳ ಜೊತಗ (ಒಟ್ಟು 13 ಗ್ರಾಮಗಳು) ನೆದರ್‌ಲ್ಯಾಂಡ್ ಸರ್ಕಾರದ ಸಹಾಯದ ಸಮಗ್ರ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಯೋಜನೆಯ ಪ್ಯಾಕೇಜ್-13ರಲ್ಲಿ ಸೇರಿವೆ. ಈ ಗ್ರಾಮಗಳಲ್ಲಿ ತಲಾ 70 ಲೀಟರ್ ಪ್ರತಿದಿನದಂತೆ ಕುಡಿಯುವ ನೀರು ಸರಬರಾಜು ಮಾಡುವ ಯೋಜನೆಗೆ 1,73,10000 ರೂ.ಗಳಿಗೆ ವಿನ್ಯಾಸ ಮತ್ತು ಅಂದಾಜನ್ನು ತಯಾರಿಸಲಾಗಿದೆ. ಈ ಕಾಮಗಾರಿಗಳಿಗಾಗಿ ಬಂದಿರುವ ಟೆಂಡರ್ ಸರ್ಕಾರದ ಪರಿಶೀಲನೆಯಲ್ಲಿದೆ. ಟೆಂಡರ್ ಅನುಮೋದಿಸಲ್ಪಟ್ಟ ನಂತರ ಕಾಮಗಾರಿಗಳನ್ನು ಪೂರೈಸಲು 18 ತಿಂಗಳ ಕಾಲಾವಕಾಶವಿರುತ್ತದೆ.

ಇ) ಸದರಿ ಗ್ರಾಮಗಳಿಗೆ ಸಂಬಂಧಿಸಿದಂತೆ ನೆದರ್‌ಲ್ಯಾಂಡ್ ಸಹಾಯದ ಕುಡಿಯುವ ನೀರು ಸರಬರಾಜಿನ ಕೆಲಸ ಕಾಮಗಾರಿಗಳ ಟೆಂಡರ್ ಸರ್ಕಾರದ ಪರಿಶೀಲನೆಯಲ್ಲಿದ್ದು ಇದರ ಬಗ್ಗೆ ಶೀಘ್ರದಲ್ಲಿ ಕ್ರಮ ತೆಗೆದುಕೊಳ್ಳಲಾಗುವುದು. ಪಂಚಾಯತ್ ಕಾರ್ಯಕ್ರಮದ ಯೋಜನೆಯಡಿಯಲ್ಲಿ ಈಗಾಗಲೇ 1997-98ನೇ ಸಾಲಿನಲ್ಲಿ ಯಡಹಳ್ಳಿ, ಇಂಗಳಗಿ ಗ್ರಾಮಗಳಲ್ಲಿ ಒಂದೊಂದು ಕೈಪಂಪು ಕೊಳವೆ ಬಾವಿಗಳನ್ನು ಕೊರೆಯಲಾಗಿದೆ. ಜೀರಗಾಳ ಗ್ರಾಮದಲ್ಲಿ ಕಿರುನೀರು ಪೂರೈಕೆ ಯೋಜನೆಯ ಪುನಃಶ್ಚೇತನದಡಿಯಲ್ಲಿ ಜಲಸಂಗ್ರಹಾಲಯವನ್ನು ನಿರ್ಮಿಸುವ ಉದ್ದೇಶವಿದೆ.